◆ ಹೆಚ್ಚು ಆಧುನಿಕ, ಪ್ರಯೋಗಶೀಲ ಅಂತ ಹೇಳುವಾಗ ನೀವು ಯಾರನ್ನಾದರೂ ಮನಸ್ಸಿನಲ್ಲಿ ಇಟ್ಟುಕೊಂಡಿದ್ದಿರಾ?

ಆಗ ನನಗೆ ಟಾಲ್‌ಸ್ಟಾಯ್, ದಾಸ್ತೋವೆಸ್ಕಿ, ಸ್ಟೆಂಡಾಲ್ ಅಥವಾ ಥಾಮಸ್ ಮನ್ ದೊಡ್ಡ ಬರಹಗಾರರು ಅನ್ನಿಸುತ್ತಿರಲಿಲ್ಲ. ನನ್ನ ಹೀರೊಗಳು ವರ್ಜಿನಿಯಾ ವೂಲ್ಫ್ ಮತ್ತು ಫಾಕ್ನರ್. ಈಗ ಆ ಪಟ್ಟಿಗೆ ಪ್ರೌಸ್ಟ್ ಮತ್ತು ನಬೊಕೊವ್‌ರನ್ನು ಸೇರಿಸುತ್ತೇನೆ.

◆ 'ದ ನ್ಯೂ ಲೈಫ್'ನ ಆರಂಭದ ಸಾಲು, 'ಒಂದು ದಿನ ಒಂದು ಪುಸ್ತಕವನ್ನು ಓದಿದೆ. ಅದು ನನ್ನ ಜೀವನವನ್ನೇ ಬದಲಾಯಿಸಿತು'. ನಿಮ್ಮ ಮೇಲೆ ಆ ರೀತಿ ಯಾವುದಾದರೂ ಪುಸ್ತಕ ಪ್ರಭಾವ ಬೀರಿತೆ?

ಇಪ್ಪತ್ತೊಂದು ಅಥವಾ ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಓದಿದ 'ದ ಸೌಂಡ್ ಅಂಡ್ ದ ಫ್ಯುರಿ' ಬಹಳ ಪ್ರಭಾವ ಬೀರಿತು. ಪೆಂಗ್ವಿನ್ ಪ್ರಕಟಿಸಿದ ಪ್ರತಿಯನ್ನು ಕೊಂಡುತಂದಿದ್ದೆ. ಆಗ ಅಷ್ಟು ಚೆನ್ನಾಗಿ ಇಂಗ್ಲಿಷ್ ಬರುತ್ತಿರಲಿಲ್ಲ. ಹಾಗಾಗಿ ಅದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿತ್ತು. ಆ ಪುಸ್ತಕದ ಬಹಳ ಒಳ್ಳೆಯ ಅನುವಾದ ಟರ್ಕಿಶ್‌ನಲ್ಲಿತ್ತು. ಎರಡನ್ನೂ ಮೇಜಿನ ಮೇಲಿಟ್ಟುಕೊಂಡು ಅರ್ಧ ಪ್ಯಾರ ಇಂಗ್ಲಿಷಿನಲ್ಲಿ ಓದಿ ಅದರ ಅನುವಾದವನ್ನು ಮತ್ತೊಂದು ಪುಸ್ತಕದಲ್ಲಿ ಓದುತ್ತಿದ್ದೆ. ಆ ಪುಸ್ತಕ ಅಳಿಸಲಾಗದ ಪ್ರಭಾವ ಬೀರಿತು. ನನ್ನದೇ ಆದ ಶೈಲಿಯನ್ನು ರೂಪಿಸಿಕೊಳ್ಳುವಲ್ಲಿ ಆ ಪುಸ್ತಕದ ಪ್ರಭಾವವಿದೆ. ಅದನ್ನು ಓದಿದ ಮೇಲೆ ಉತ್ತಮ ಪುರುಷದಲ್ಲಿ ಬರೆಯಲಾರಂಭಿಸಿದೆ. ಪ್ರಥಮ ಪುರುಷದಲ್ಲಿ ಬರೆಯುವುದಕ್ಕಿಂತ ನಾನೇ ಆ ಪಾತ್ರವಾಗಿ ಬರೆಯುವುದು ಸುಲಭ ಅನ್ನಿಸುತ್ತದೆ.

◆ ನಿಮ್ಮ ಮೊದಲ ಕಾದಂಬರಿ ಪ್ರಕಟವಾಗಲು ಬಹಳ ವರ್ಷಗಳು ಬೇಕಾಯಿತು ಅಂತ ಹೇಳಿದರಲ್ಲ, ಯಾಕೆ?

ನನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ನನಗೆ ಯಾವುದೇ ಸಾಹಿತ್ಯಿಕ ಸ್ನೇಹಸಂಬಂಧಗಳಿರಲಿಲ್ಲ. ಇಸ್ತಾಂಬುಲ್‌ನ ಯಾವುದೇ ಸಾಹಿತ್ಯಿಕ ಗುಂಪಿಗೂ ಸೇರಿರಲಿಲ್ಲ. ಅದನ್ನು ಪ್ರಕಟಿಸಲು ಇದ್ದ ಒಂದೇ ದಾರಿ ಟರ್ಕಿ ಭಾಷೆಯಲ್ಲಿನ ಅಪ್ರಕಟಿತ ಕೃತಿಗಳ ಸಾಹಿತ್ಯಿಕ ಸ್ಪರ್ಧೆಗೆ ಕಳಿಸುವುದು. ಸ್ಪರ್ಧೆಗೆ ಕಳಿಸಿ ಬಹುಮಾನ ಗೆದ್ದೆ. ಅದನ್ನು ದೊಡ್ಡ ಪ್ರಕಾಶಕರೊಬ್ಬರು ಪ್ರಕಟಿಸಬೇಕಿತ್ತು. ಆ ಸಮಯದಲ್ಲಿ ಟರ್ಕಿಯ ಆರ್ಥಿಕ ಸ್ಥಿತಿ ಹದಗೆಟ್ಟಿತ್ತು. ಅವರು ಪ್ರಕಟಿಸಲು ಒಪ್ಪಿದರು. ಆದರೆ, ಕಾದಂಬರಿಯನ್ನು ಪ್ರಕಟಿಸಲು ತಡಮಾಡಿದರು.

◆ ಎರಡನೆಯ ಕಾದಂಬರಿ ಪ್ರಕಟಣೆ ಸುಲಭವಾಗಿತ್ತೇ?

ಎರಡನೆಯದು ರಾಜಕೀಯ ಪುಸ್ತಕ. ಯಾವುದೇ ಪ್ರಚಾರದ ಪುಸ್ತಕವಲ್ಲ. ಮೊದಲ ಪುಸ್ತಕ ಪ್ರಕಟವಾಗಲಿ ಅಂತ ಕಾಯುತ್ತಿರುವಾಗಲೇ ಆ ಪುಸ್ತಕವನ್ನು ಬರೆದಿದ್ದೆ. ಆ ಪುಸ್ತಕ ಬರೆಯಲು ಎರಡೂವರೆ ವರ್ಷ ತೆಗೆದುಕೊಂಡಿದ್ದೆ. ಇದ್ದಕ್ಕಿದ್ದಂತೆ ಒಂದು ರಾತ್ರಿ ಮಿಲಿಟರಿ ದಂಗೆಯಾಯಿತು. ಮಾರನೆಯ ದಿನ ಬೆಳಗ್ಗೆ ಮೊದಲ ಪುಸ್ತಕದ ಪ್ರಕಾಶಕ ನಮ್ಮ ನಡುವೆ ಒಪ್ಪಂದವಾಗಿದ್ದರೂ ಪುಸ್ತಕ ಪ್ರಕಟಿಸುವುದಿಲ್ಲ ಎಂದು ನಿರಾಕರಿಸಿಬಿಟ್ಟ. ಆಗ ಒಂದು ವೇಳೆ ಆ ರಾಜಕೀಯದ ಪುಸ್ತಕವನ್ನು ಬರೆದು ಮುಗಿಸಿದರೂ ಐದಾರು ವರ್ಷಗಳವರೆಗೆ ಪ್ರಕಟಿಸುವುದು ಸಾಧ್ಯವಿಲ್ಲ ಎಂದರ್ಥವಾಯಿತು. ಮಿಲಿಟರಿಯವರು ಪ್ರಕಟಿಸಲು ಬಿಡುತ್ತಿರಲಿಲ್ಲ. ಆಗ ಅನ್ನಿಸಿದ್ದು: ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಕಾದಂಬರಿಕಾರನಾಗುತ್ತೇನೆ ಎಂದು ಏಳು ವರ್ಷ ಬರೆದೆ. ಟರ್ಕಿ ಭಾಷೆಯಲ್ಲಿ ಏನಾದರೂ